# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 883 |
| ಮಾನ್ಯ ಸದಸ್ಯರ ಹೆಸರು | : | ಶ್ರೀ. ಸಿ.ಎನ್.ಮಂಜೇಗೌಡ,<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 19.08.2025 |
| ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಮೈಸೂರು ಜಿಲ್ಲೆಯ ಹೆಚ್.ಡಿ. ಕೋಟೆ ತಾಲ್ಲೂಕಿನ ಎನ್. ಬೇಗೂರು ಮತ್ತು ಬೀಚನಹಳ್ಳಿ ಗ್ರಾಮ ಪಂಚಾಯತಿ ಹಾಗೂ ಸರಗೂರು ತಾಲ್ಲೂಕಿನ ಬೀದರಹಳ್ಳಿ, ಯಗನೂರು ಹಂಚಿಪುರ ಮತ್ತು ಬಿ. ಮಟಕರೆ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಹತ್ತು ಸಾವಿರ ರೈತ ಕುಟುಂಬಗಳು ವಾಸ ಮಾಡುತ್ತಾ ಕೃಷಿ ಉತ್ಪನ್ನಗಳನ್ನು ಬೆಳೆಯುತ್ತಿದ್ದರೂ ಅವರಿಗೆ ಸೂಕ್ತ ಕೃಷಿ ಮಾರುಕಟ್ಟೆ ಸೌಲಭ್ಯ ವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿರುವುದಿಲ್ಲ.<br><br>ಆದರೆ, ಸಂತೆಸರಗೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾರುಕಟ್ಟೆ ಕ್ಷೇತ್ರ ದಿಂದ ಹೆಚ್.ಡಿ.ಕೋಟೆ ತಾಲ್ಲೂಕನ್ನು ಬೇರ್ಪಡಿಸಿ ಸಂತೆಸರಗೂರು ತಾಲ್ಲೂಕಿಗೆ ಸಂತೆಸರಗೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯನ್ನು ಹಾಗೂ ಹೆಚ್.ಡಿ.ಕೋಟೆ ತಾಲ್ಲೂಕನ್ನು ಒಳಗೊಂಡ ಮಾರುಕಟ್ಟೆ ಕ್ಷೇತ್ರಕ್ಕೆ ಯರಹಳ್ಳಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯನ್ನು ದಿನಾಂಕ:08.03.2023ರ ಅಧಿಸೂಚನೆ ಮೂಲಕ ಸ್ಥಾಪಿಸಲಾಗಿದೆ. ಸದರಿ ಸಮಿತಿ ವ್ಯಾಪ್ತಿಯಲ್ಲಿ ಹೆಚ್.ಡಿ.ಕೋಟೆ ಉಪ ಮಾರುಕಟ್ಟೆ ಕಾರ್ಯನಿರ್ವಹಿಸುತ್ತಿದೆ. |
| (ಆ) | ಬಂದಿದ್ದಲ್ಲಿ ಕಾಡಂಚಿನ ಗ್ರಾಮದಿಂದ ರೈತರು ತಾವು ಬೆಳೆದ ಕೃಷಿ ಉತ್ಪನ್ನಗಳನ್ನು 90 ಕಿ.ಮೀ ದೂರದ ಮೈಸೂರಿಗೆ ಕೊಂಡೊಯ್ಯಲು ಅಗತ್ಯ ಮೂಲಭೂತ ಸೌಲಭ್ಯಗಳು ಇಲ್ಲದಿರುವುದು<br>ಸರ್ಕಾರ ಮನಗಂಡಿದೆಯೇ; | ಯರಹಳ್ಳಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಪ್ರಾಂಗಣದ ವಿಸ್ತೀರ್ಣ 3.31 ಎಕರೆ ಇರುತ್ತದೆ. ಸ್ಥಳೀಯ ಉಪಯೋಗಕ್ಕೆ ಆಗುವಷ್ಟು ತರಕಾರಿ ವ್ಯಾಪಾರ ವಹಿವಾಟು ನಡೆಯುತ್ತಿದೆ. ಹಂಗಾಮಿನಲ್ಲಿ ಹತ್ತಿ, ಮೆಕ್ಕೆಜೋಳ, ರಾಗಿ ಹಸಿಶುಂಠಿ ವ್ಯಾಪಾರ ವಹಿವಾಟು ನಡೆಯುತ್ತಿದೆ.<br><br>ಸಂತೆಸರಗೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಪ್ರಾಂಗಣದ ವಿಸ್ತೀರ್ಣ 6 ಎಕರೆ ಇರುತ್ತದೆ. ಸದರಿ ಪ್ರಾಂಗಣದಲ್ಲಿ ರೈತ ಭವನ, ಕ್ಯಾಂಟೀನ್, ವೇಬ್ರಿಡ್ಜ್, ಗೋದಾಮುಗಳು, ಹರಾಜುಕಟ್ಟೆ, ಶೌಚಾಲಯ ಮುಂತಾದ ಸೌಲಭ್ಯಗಳನ್ನು ಒದಗಿಸಲಾಗಿದೆ. |

| | | |
|---|---|---|
| (ಇ) | ಹಾಗಿದ್ದಲ್ಲಿ, ಕೃಷಿ ಉತ್ಪನ್ನಗಳನ್ನು ಬೆಳೆದರೂ ಮಾರಾಟ ಮಾಡಲಾಗದೆ ಜೀವನ ನಿರ್ವಹಣೆಗೆ ತೊಂದರೆ ಕೊಡುತ್ತಿರುವ ಇವರಿಗೆ ಎನ್. ಬೇಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗುಂಡ್ರೆ ಅರಣ್ಯದ ವ್ಯಾಪ್ತಿಯ ಗಂಡತ್ತೂರು ಗ್ರಾದ ಭೋಳಮ್ಮನ ಅರಣ್ಯ ಗೇಟಿನ ಮೂಲಕ ಕೇರಳ ರಾಜ್ಯಕ್ಕೆ ಕೇವಲ ಎಂಟು ಕಿಲೋಮೀಟರ್ ದೂರದಲ್ಲಿರುವ ಕೊಳವಳ್ಳಿ ಗ್ರಾಮಕ್ಕೆ ಕೃಷಿ ಉತ್ಪನ್ನಗಳನ್ನು ಕೊಂಡೊಯ್ಯು ಮಾರಾಟ ಮಾಡಿಬರಲು ಅರಣ್ಯ ಇಲಾಖೆಯವರೊಂದಿಗೆ ಚರ್ಚಿಸಿ ಅನುಮತಿ ದೊರಕಿಸಿ ಕೊಡಲಾಗುವುದೇ; | ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಗುಂಡ್ರೆ ವಲಯವು ಹುಲಿ ಮೀಸಲು ಅರಣ್ಯದ ಪ್ರಮುಖ ಪ್ರದೇಶವಾಗಿದ್ದು, ವಲಯದ ಗಡಿ ಅಂಚಿನ ಮೂಲಕ ಹಾದು ಹೋಗಿರುವ ಕಬಿನಿ ನದಿಯ ಹಿನ್ನೀರಿನ ಮೂಲಕ ಬೇಸಿಗೆ ಸಮಯದಲ್ಲಿ ಮತ್ತು ಇತರೆ ಸಮಯದಲ್ಲಿ ಆಹಾರವನ್ನರಸಿ ಬರುವ ಹುಲಿ, ಚಿರತೆ, ಆನೆ, ಕಾಟಿ, ಕರಡಿ, ಜಿಂಕೆ, ಕಡವ ಹಾಗೂ ಇತರ ವನ್ಯಜೀವಿಗಳ ದಟ್ಟಣೆಯು ಅತಿಯಾಗಿರುವ ಪ್ರದೇಶವಾಗಿದ್ದು, ಎನ್. ಬೇಗೂರು ಮತ್ತು ಸುತ್ತಮುತ್ತಲು ಇರುವ ಗ್ರಾಮ ಪಂಚಾಯಿತಿಗಳ ರೈತರ ಅನುಕೂಲಕ್ಕಾಗಿ ಕೃಷಿ ಉತ್ಪನ್ನಗಳು ಹಾಗೂ ದವಸ ಧಾನ್ಯಗಳನ್ನು ಕೇರಳ ರಾಜ್ಯಕ್ಕೆ ಮಾರಾಟ ಮಾಡಲು ಸುಮಾರು 10 ಕಿ.ಮೀ ಅರಣ್ಯ ಪ್ರದೇಶದೊಳಗೆ ಸಂಚರಿಸಬೇಕಾಗಿರುತ್ತದೆ. |
| (ಈ) | ಈ ಪ್ರದೇಶದಲ್ಲಿ ಅರಣ್ಯ ಇಲಾಖೆಗೆ ಸೇರಿದ ರಸ್ತೆ ಇದ್ದು, ಸದರಿ ರಸ್ತೆಯನ್ನೇ ಮೇಲ್ಕಂಡ ಪಂಚಾಯತಿಗಳ ರೈತರು ಕೃಷಿ ಉತ್ಪನ್ನ ಮಾರಾಟ ಸಲುವಾಗಿ ಹೋಗಿ ಬರುವ ಸಲುವಾಗಿ ಬಳಸಲು ಅನುಮತಿ ನೀಡಲು ಕ್ರಮವಹಿಸ ಲಾಗುವುದೇ? | ಆದ್ದರಿಂದ, ವನ್ ಸಂರಕ್ಷಣ್ ಏವಂ ಸಂವರ್ಧನ್ ಅಧಿನಿಯಮ 1980 ಸೆಕ್ಷನ್ (2), ವನ್ಯಜೀವಿ ಸಂರಕ್ಷಣೆ ಕಾಯ್ದೆ 1972 ಕಲಂ 35(6), ಕರ್ನಾಟಕ ಅರಣ್ಯ ಕಾಯ್ದೆ ಸೆಕ್ಷನ್ (24) ಗಳ ಪ್ರಕಾರ ಈ ರೀತಿ ರೈತರಿಗೆ ಹುಲಿ ಸಂರಕ್ಷಿತ ಮೀಸಲು ಅರಣ್ಯ ಪ್ರದೇಶದ ಮೂಲಕ ಸಂಚರಿಸುವ ಅವಕಾಶ ಇರುವುದಿಲ್ಲ.<br><br>ಮುಂದುವರೆದು, ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: FEE 299 FWL 2007 ದಿನಾಂಕ:20-12-2007ರ ಪ್ರಕಾರ ಸದರಿ ಪ್ರದೇಶವು ಕ್ರಿಟಿಕಲ್ ಕೋರ್ ಟೈಗರ್ ಹ್ಯಾಬಿಟೇಟ್ ವ್ಯಾಪ್ತಿಯೊಳಗೆ ಬರುವುದರಿಂದ ರೈತರಿಗೆ ಹುಲಿ ಸಂರಕ್ಷಿತ ಮೀಸಲು ಅರಣ್ಯ ಪ್ರದೇಶದ ಮೂಲಕ ಸಂಚರಿಸುವ ಅವಕಾಶ ಇರುವುದಿಲ್ಲ. |

**ಸಂಖ್ಯೆ: ಸಿಒ 190 ಎಂಆರ್‌ಇ 2025**

**(ಶಿವಾನಂದ ಎಸ್. ಪಾಟೀಲ)**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ
ಕೃಷಿ ಮಾರುಕಟ್ಟೆ ಸಚಿವರು